**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ.**

**ಸೆಷನ್ಸ್ ಕೇಸ್ ನಂಃ 15/2020 ಅ.ಸಾ. 20**

**ಚಾ.ಸಾ.44**

| | | |
|---|---|---|
| ಸಾಕ್ಷಿದಾರರ ಹೆಸರು | - | ಮಂಜುನಾಥ |
| ತಂದೆಯ ಹೆಸರು | - | ಹಿರಿಯಣ್ಣ ನಾಯ್ಕ |
| ವಯಸ್ಸು | - | 52 ವರ್ಷ |
| ಉದ್ಯೋಗ | - | ಪೋಲಿಸ್ ನಿರೀಕ್ಷಕರು |
| ವಿಳಾಸ | - | ಲೋಕಾಯುಕ್ತ ಪೋಲಿಸ್ ಠಾಣೆ, ಉಡುಪಿ. |

ದಿನಾಂಕಃ 05-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

1. ದಿನಾಂಕ 12-03-2018 ರಿಂದ 11-07-2018 ರವರೆಗೆ ಮತ್ತು 01-10-2018 ರಿಂದ 04-06-2021 ರವರೆಗೆ ಉಡುಪಿ ವೃತ್ತದ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಮಲ್ಪೆ ಪೋಲಿಸ್ ಠಾಣೆಯು ಉಡುಪಿ ವೃತ್ತದ ವ್ಯಾಪ್ತಿಗೆ ಬರುತ್ತದೆ.

ದಿನಾಂಕ 07-07-2020 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ43 ಇವರಿಂದ ಕೈಗೆತ್ತಿಕೊಂಡು ಕಡತ ಪರಿಶೀಲಿಸಿರುತ್ತೇನೆ. ಅದೇ ದಿನ ಬೆಳಿಗ್ಗೆ 4-00 ಗಂಟೆಗೆ ಲಕ್ಷ್ಮೀನಗರದ ಮೂರನೇ ತಿರುವಿನಲ್ಲಿರುವ ತಕ್ಷೀರು ಸ್ಥಳಕ್ಕೆ ಭೇಟಿ ನೀಡಿ ಸ್ಥಳದಲ್ಲಿ ಹಾಜರಿದ್ದ ಚಾಸಾ-1 ತೋರಿಸಿದ ಸ್ಥಳವನ್ನು ಪಂಚರಾದ ಚಾಸಾ-6 ಮತ್ತು 10 ಇವರ ಸಮಕ್ಷಮದಲ್ಲಿ ಸ್ಥಳ ಪರಿಶೀಲಿಸಿರುತ್ತೇನೆ. ಪಂಚನಾಮೆಯ ಕಾಲದಲ್ಲಿ ಸ್ಥಳದಲ್ಲಿದ್ದ ರಕ್ತ ಮಿಶ್ರಿತ ಮಣ್ಣು ಹಾಗೂ ಸಾದಾ ಮಣ್ಣನ್ನು ಹತ್ತಿಯಿಂದ ಸಂಗ್ರಹಿಸಿ ಪ್ಲಾಸ್ಟಿಕ್ ಡಬ್ಬಕ್ಕೆ ಹಾಕಿ ಬಿಳಿ ಬಟ್ಟೆಯಿಂದ ಸುತ್ತಿ ಅರಗು ಸೀಲು ಮಾಡಿ ವಿವರವಾದ ಪಂಚನಾಮೆ ಬರೆದು ಬೆಳಿಗ್ಗೆ 4-00 ಗಂಟೆಯಿಂದ 6-00 ಗಂಟೆಯವರೆಗೆ ನಿಪಿ-2 ರಂತೆ

ತಯಾರಿಸಿರುತ್ತೇನೆ. ನಿಪಿ-2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ಸ್ಥಳದಲ್ಲಿ ಸಿಬ್ಬಂದಿಯ ಮುಖಾಂತರ ಛಾಯಾ ಚಿತ್ರ ತೆಗೆದಿರುತ್ತೇನೆ. ಸದ್ರಿ ಛಾಯಾ ಚಿತ್ರವನ್ನು ನಿಪಿ-3 ಮತ್ತು 4 ಎಂದು ಈಗಾಗಲೇ ಗುರುತಿಸಲಾಗಿದೆ. ಅಮಾನತ್ತು ಪಡಿಸಿಕೊಂಡು ಸೊತ್ತಿನ ಬಗ್ಗೆ ಸೊತ್ತುಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸ್ಥಳದಲ್ಲೇ ಕಚ್ಚಾ ನಕಾಶೆ ತಯಾರಿಸಿದ್ದು ಅದನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-27 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-27(ಬಿ) ಎಂದು ಗುರುತಿಸಲಾಯಿತು.

2. ನಂತರ ತನಿಖೆ ಮುಂದುವರಿಸಿ ಬೆಳಿಗ್ಗೆ 8-30 ಗಂಟೆಗೆ ಕೆಎಂಸಿ ಆಸ್ಪತ್ರೆಗೆ ಭೇಟಿ ನೀಡಿ ಆಸ್ಪತ್ರೆಯ ಶವಾಗಾರದಲ್ಲಿದ್ದ ಮೃತ ಯೋಗೀಶ್ ಈತನ ಶವದ ಮಹಜರನ್ನು ಪಂಚರ ಸಮಕ್ಷಮ ಪರಿಶೀಲಿಸಿರುತ್ತೇನೆ. ಶವದ ಮೇಲೆ ಸುಮಾರು ಆರು ತಿವಿದ ಗಾಯಗಳು ಇದ್ದು ಸದ್ರಿ ಗಾಯಗಳನ್ನು ವಿವರವಾಗಿ ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ. ಪಂಚರ ಸಮಕ್ಷಮದಲ್ಲಿ ಶವವನ್ನು ಪರಿಶೀಲಿಸಿ ನಿಪಿ-57 ರಂತೆ ಶವ ಮಹಜರು ತಯಾರಿಸಿರುತ್ತೇನೆ. ನಿಪಿ.57 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-57(ಬಿ) ಎಂದು ಗುರುತಿಸಲಾಯಿತು. ಶವ ಪಂಚನಾಮೆಯ ಕಾಲದಲ್ಲಿ ಪಂಚರಾದ ಚಾಸಾ.19, 20, 21 ಇವರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ರಕ್ತ ಸಂಬಂಧಿ ಚಾಸಾ.5 ಹಾಗೂ ಇತರ ಸಾಕ್ಷಿದಾರರಾದ ಚಾಸಾ.7 ಇವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ. ಶವ ಪಂಚನಾಮೆಯ ನಂತರ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಮುಂದಿನ ಕ್ರಮ ಕೈಗೊಳ್ಳುವ ಬಗ್ಗೆ ಸಿಬ್ಬಂದಿಯ ಮುಖಾಂತರ ಮನವಿ ಮಾಡಿಕೊಂಡಿರುತ್ತೇನೆ. ಫ್ರಾಸಾ.5 ನನ್ನ ಮುಂದೆ ನಿಪಿ-23 ರಂತೆ ಹೇಳಿಕೆ ಕೊಟ್ಟಿರುತ್ತಾರೆ. ನಂತರ ಅದೇ ದಿನ ಚಾಸಾ.2, 3, 4, 6 ಮತ್ತು 10 ಇವರ ಹೇಳಿಕೆ ಹಾಗೂ ಚಾಸಾ.1 ಇವರ ಮರು ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ಫ್ರಾಸಾ.1 ನನ್ನ ಮುಂದೆ ನಿಪಿ-5 ರಂತೆ ಹೇಳಿಕೆ ನೀಡಿರುತ್ತಾರೆ. ಚಾಸಾ.2 ನನ್ನ ಮುಂದೆ ನಿಪಿ-9 ರಂತೆ ಹೇಳಿಕೆ ನೀಡಿರುತ್ತಾರೆ. ಫ್ರಾಸಾ4 ನನ್ನ ಮುಂದೆ ನಿಪಿ-17 ರಂತೆ ಹೇಳಿಕೆ ನೀಡಿರುತ್ತಾರೆ.

3. ನಂತರ ತನಿಖೆ ಮುಂದುವರಿಸಿ ಆರೋಪಿಯ ಪತ್ತೆಗಾಗಿ ಅಧಿಕಾರಿ ಮತ್ತು ಇತರೆ ಸಿಬ್ಬಂದಿಯೊಂದಿಗೆ ಕರ್ತವ್ಯದಲ್ಲಿದ್ದಾಗ ಆರೋಪಿತರು ಅದೇ ದಿವಸ ರಾತ್ರಿ ಮೂಡುತೋನ್ಸೆ ಗ್ರಾಮದ ಕೋಟೆ ರಸ್ತೆ ಎಂಬಲ್ಲಿ ಇದ್ದಾರೆ ಎಂಬ ಬಗ್ಗೆ ಮಾಹಿತಿ ಬಂದಿದ್ದು ತಕ್ಷಣ ಸದ್ರಿ ಸ್ಥಳಕ್ಕೆ ಹೋಗಿ ಕಾಯುತ್ತಿದ್ದಾಗ ರಾತ್ರಿ 9-30 ರ ಹೊತ್ತಿಗೆ ಒಂದು ಬಿಳಿ ಬಣ್ಣದ ಕಾರು ಬರುತ್ತಿದ್ದು ಸಂಶಯದ ಮೇಲೆ ಸದ್ರಿ ಕಾರನ್ನು ನಿಲ್ಲಿಸಿದಾಗ ವಾಹನದಲ್ಲಿದ್ದ ವ್ಯಕ್ತಿಗಳು ವಾಹನವನ್ನು ನಿಲ್ಲಿಸಿ ಓಡಲು ಪ್ರಾರಂಭಿಸಿದರು, ಅವರನ್ನು ಹಿಡಿದು ವಿಚಾರಿಸಲಾಗಿ ಅವರು ಈ ಪ್ರಕರಣದ ಆರೋಪಿತರು ಎಂದು ಖಾತ್ರಿ ಆಗಿದ್ದು ನಂತರ ಆರೋಪಿತರನ್ನು ವಶಕ್ಕೆ ಪಡೆದು ಇಬ್ಬರು ಪಂಚರನ್ನು ಬರ ಮಾಡಿಕೊಂಡು ಒಂದನೇ ಆರೋಪಿಯ ಅಂಗ ಜಪ್ತಿ ಮಾಡಲಾಗಿ ಆತನ ಕಿಸೆಯಲ್ಲಿ ಒಂದು ಮೊಬೈಲ್ ಮತ್ತು ಎರಡು ಸಿಮ್ ಇದ್ದು, ಎರಡನೇ ಆರೋಪಿಯ ಬಳಿ ಸಹಾ ಒಂದು ಮೊಬೈಲ್ ಮತ್ತು ಎರಡು ಸಿಮ್ ಇದ್ದು, ನಾಲ್ಕನೇ ಆರೋಪಿಯ ಅಂಗ ಜಪ್ತಿ ಮಾಡಲಾಗಿ ಒಂದು ಮೊಬೈಲ್ ಸಿಕ್ಕಿದ್ದು, ಆರೋಪಿತರನ್ನು ಪಂಚರ ಸಮಕ್ಷಮದಲ್ಲಿ ದಸ್ತಗಿರಿ ಮಾಡಿ ಮೊಬೈಲ್ ಮತ್ತು ಕಾರನ್ನು ಅಮಾನತ್ತುಪಡಿಸಿಕೊಂಡು ವಿವರವಾದ ಪಂಚನಾಮೆ ಬರೆದಿರುತ್ತೇನೆ. ಸದ್ರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ಈಗಾಗಲೇ ನಿಪಿ-45 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-45(ಸಿ) ಎಂದು ಗುರುತಿಸಲಾಯಿತು. ಆರೋಪಿತರಿಂದ ವಶಪಡಿಸಿಕೊಂಡ ಮೊಬೈಲ್ ಫೋನ್ ಗಳನ್ನು ಈಗಾಗಲೇ ಎಂಒ-6 ರಿಂದ 8 ಎಂದು ಗುರುತಿಸಲಾಗಿದೆ. ಕಾರಿನ ಛಾಯಾ ಚಿತ್ರವನ್ನು ಈಗ ನೋಡುತ್ತಿದ್ದು ನಿಪಿ-46 ಎಂದು ಈಗಾಗಲೇ ಗುರುತಿಸಲಾಗಿದೆ. 2 ಮತ್ತು 4 ನೇ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 1 ಮತ್ತು 3 ನೇ ಆರೋಪಿತರು ಗೈರುಹಾಜರಿದ್ದು ಅವರನ್ನು ಗುರುತಿಸುವ ಬಗ್ಗೆ ತಕರಾರು ಇರುವುದಿಲ್ಲ. ನಂತರ ಆರೋಪಿತರೊಂದಿಗೆ ಠಾಣೆಗೆ ಬಂದು ಸೊತ್ತಿನ ಪಟ್ಟಿಯನ್ನು ತಯಾರಿಸಿರುತ್ತೇನೆ. ಅದೇ ದಿನ ಚಾಸಾ-11 ಮತ್ತು 12 ಇವರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ.

4. ದಿನಾಂಕ 08-07-2020 ರಂದು ಪ್ರಕರಣದ ತನಿಖೆ ಮುಂದುವರಿಸಿ, ಇಬ್ಬರು ಪಂಚರನ್ನು ಬರ ಮಾಡಿಕೊಂಡು 1 ರಿಂದ 4 ನೇ ಆರೋಪಿತರ ಸ್ವಇಚ್ಚಾ ಹೇಳಿಕೆಯನ್ನು ದಾಖಲು ಮಾಡಿ ಕೊಂಡಿರುತ್ತೇನೆ. ಆರೋಪಿತರ ಸ್ವ ಇಚ್ಚಾ ಹೇಳಿಕೆಯನ್ನು ಈಗ ನೋಡುತ್ತಿದ್ದು, ಒಂದನೇ ಆರೋಪಿಯ ಸ್ವಇಚ್ಚಾ ಹೇಳಿಕೆಯಲ್ಲಿ ಸಾಕ್ಷಿ ಎಂದು ಗ್ರಹಿಸುವ ಭಾಗವನ್ನು ನಿಪಿ-71 ಎಂದು ಗುರುತಿಸಲಾಯಿತು. ಎರಡನೇ ಆರೋಪಿಯ ಸ್ವಇಚ್ಚಾ ಹೇಳಿಕೆಯಲ್ಲಿ ಸಾಕ್ಷಿ ಎಂದು ಗ್ರಹಿಸುವ ಭಾಗವನ್ನು ನಿಪಿ-73 ಎಂದು ಗುರುತಿಸಲಾಯಿತು. ಮೂರನೇ ಆರೋಪಿಯ ಸ್ವಇಚ್ಚಾ ಹೇಳಿಕೆಯಲ್ಲಿ ಸಾಕ್ಷಿ ಎಂದು ಗ್ರಹಿಸುವ ಭಾಗವನ್ನು ನಿಪಿ-74 ಎಂದು ಗುರುತಿಸಲಾಯಿತು. ಆರೋಪಿತರು ತಮ್ಮ ಸ್ವ ಇಚ್ಚಾ ಹೇಳಿಕೆಯಲ್ಲಿ ತಮ್ಮೊಂದಿಗೆ ಬಂದಲ್ಲಿ ಕೃತ್ಯ ನಡೆದ ಸ್ಥಳ, ಕೃತ್ಯದ ಸಮಯ ಕಾರನ್ನು ನಿಲ್ಲಿಸಿದ ಸ್ಥಳ ಹಾಗೂ ಕೃತ್ಯಕ್ಕೆ ಉಪಯೋಗಿಸಿದ ಆಯುಧ ಮತ್ತು ಕೃತ್ಯದ ಸಮಯ ಆರೋಪಿ ಅಣ್ಣು ಧರಿಸಿದ ಬಟ್ಟೆಯನ್ನು ತೋರಿಸಿ ಹಾಜರುಪಡಿಸುವುದಾಗಿ ಹೇಳಿಕೆ ನೀಡಿರುತ್ತಾರೆ. ಆರೋಪಿತರು ಕೊಟ್ಟ ಸ್ವ ಇಚ್ಚಾ ಹೇಳಿಕೆಯಂತೆ ಆರೋಪಿತರು ನಮ್ಮನ್ನು ಮತ್ತು ಪಂಚರನ್ನು ಅವರು ತೋರಿಸಿಕೊಟ್ಟಂತೆ ಎರಡು ವಾಹನದಲ್ಲಿ ಅವರು ನಮ್ಮನ್ನು ಉಡುಪಿ-ಸಂತೆಕಟ್ಟೆ ಮುಖಾಂತರ ಲಕ್ಷ್ಮೀನಗರದ ಮೂರನೇ ಕ್ರಾಸ್ ಎಂಬಲ್ಲಿಗೆ ಕರೆದುಕೊಂಡು ಹೋಗಿ ಮೃತನ ಮನೆಯ ಎದುರುಗಡೆಯ ರಸ್ತೆಯನ್ನು ತೋರಿಸಿ ಇದೇ ರಸ್ತೆಯಲ್ಲಿ ಕೃತ್ಯ ಎಸಗಿರುವುದಾಗಿ ತಿಳಿಸಿರುತ್ತಾರೆ. ಹಾಗೂ ಹಲ್ಲೆಯ ನಂತರ ಮೃತ ಬಿದ್ದ ಸ್ಥಳವನ್ನು ಸಹಾ ತೋರಿಸಿರುತ್ತಾರೆ. ಈ ಎರಡೂ ಸ್ಥಳಗಳನ್ನು ಪರಿಶೀಲಿಸಿ ನಿಪಿ-39 ರಂತೆ ವಿವರವಾದ ಪಂಚನಾಮೆ ಬರೆದಿರುತ್ತೇನೆ. ನಿಪಿ-39 ರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-39(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಸ್ಥಳದಲ್ಲಿ ರಕ್ತದ ಕಲೆಗಳು ಸಹಾ ಬಿದ್ದಿರುತ್ತವೆ. ಸದ್ರಿ ಸ್ಥಳವನ್ನು ಪಂಚರ ಸಮಕ್ಷಮ ಪರಿಶೀಲಿಸಿರುತ್ತೇನೆ. ನಂತರ ಆರೋಪಿತರು ಅಲ್ಲಿಂದ 300 ಮೀ. ನಷ್ಟು ದೂರ ಕರೆದುಕೊಂಡು ಹೋಗಿ ಒಂದು ಸ್ಥಳವನ್ನು ತೋರಿಸಿದ್ದು ಇದೇ ಸ್ಥಳದಲ್ಲಿ ಹಲ್ಲೆ ಮಾಡುವ ಸಮಯ ನಾವು ಕಾರನ್ನು ನಿಲ್ಲಿಸಿದ ಸ್ಥಳ ಎಂದು ತೋರಿಸಿಕೊಟ್ಟಿದ್ದು ಸದ್ರಿ ಸ್ಥಳವು ಬೊಬ್ಬರ್ಯಕಟ್ಟೆ ದೇವಸ್ಥಾನದ ಬಳಿ ಇರುವ ಕಾಂಕ್ರೀಟ್ ರಸ್ತೆಯ ಪಕ್ಕದ ಸ್ಥಳವಾಗಿದ್ದು ಅದನ್ನು

ಪರಿಶೀಲಿಸಿದ್ದು ನಂತರ ಅಲ್ಲಿಂದ ಸುಮಾರು 20 ಅಡಿ ದೂರ ಕರೆದುಕೊಂಡು ಹೋಗಿ ಗಿಡಗಂಟಿಯ ಮಧ್ಯದಲ್ಲಿ ಆರೋಪಿ ರೋಹಿತ್ ಪಿಂಟೋ ಪ್ಲಾಸ್ಟಿಕ್ ಚೀಲವನ್ನು ತೆಗೆದು ತೋರಿಸಿದ್ದು ಅದನ್ನು ಬಿಚ್ಚಿ ನೋಡಲಾಗಿ ಅದರಲ್ಲಿ ಒಂದು ಚೂರಿ ಹಾಗೂ  ಅಂಗಿ ಇದ್ದು, ಸದ್ರಿ ಚೂರಿಯನ್ನು ಕೃತ್ಯಕ್ಕೆ ಬಳಸಿದ್ದು ಬಟ್ಟೆಗಳು 4 ನೇ ಆರೋಪಿ ಕೃತ್ಯದ ಸಮಯ ಧರಿಸಿದ್ದ ಅಂಗಿಯಾಗಿದ್ದು ಅವುಗಳನ್ನು ಪಂಚರ ಸಮಕ್ಷಮ ನಿಪಿ-42 ರಂತೆ ಪ್ಲಾಸ್ಟಿಕ್ ಸಮೇತ ಅಮಾನತ್ತು ಪಡಿಸಿಕೊಂಡಿರುತ್ತೇವೆ. ಸಾಕ್ಷಿಯ ಸಹಿಯನ್ನು ನಿಪಿ-42(ಬಿ) ಎಂದು ಗುರುತಿಸಲಾಯಿತು. ಅದೇ ಸಮಯ ತೆಗೆದ ಛಾಯಾ ಚಿತ್ರಗಳನ್ನು ಈಗ ನೋಡುತ್ತಿದ್ದು ನಿಪಿ-43 ಮತ್ತು 44 ಎಂದು ಈಗಾಗಲೇ ಗುರುತಿಸಲಾಗಿದೆ. ಸದ್ರಿ ಸೊತ್ತುಗಳನ್ನು ಪಂಚರ ಸಮಕ್ಷಮದಲ್ಲಿ ಬಿಳಿ ಬಟ್ಟೆಯಿಂದ ಸುತ್ತಿ ಪಂಚರ ಸಹಿವುಳ್ಳ ಚೀಟಿ ಅಂಟಿಸಿ ಸೀಲು ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇವೆ. ಚೂರಿಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಎಂಓ-3 ಎಂದು ಗುರುತಿಸಲಾಗಿದೆ. ಬಿಳಿ ಬಣ್ಣದ ನೀಲಿ ಗೆರೆಗಳು ಇರುವ ಕಾಟನ್ ಅಂಗಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಂಓ-5 ಎಂದು ಗುರುತಿಸಲಾಗಿದೆ. ನಂತರ ವಾಪಾಸ್ಸು ಠಾಣೆಗೆ ಬಂದು ಸೊತ್ತಿನ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿವಸ ಸಾಕ್ಷಿದಾರರಾದ ಚಾಸಾ-2, 3 ಮತ್ತು 4 ರವರ ಮರು ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ. ಚಾಸಾ-2 ನನ್ನ ಮುಂದೆ ನಿಪಿ-10 ರಂತೆ ಹೇಳಿಕೆ ಕೊಟ್ಟಿರುತ್ತಾರೆ, ಚಾಸಾ-3 ನನ್ನ ಮುಂದೆ ನಿಪಿ-14 ರಂತೆ ಹೇಳಿಕೆ ಕೊಟ್ಟಿರುತ್ತಾರೆ. ಚಾಸಾ.4 ನನ್ನ ಮುಂದೆ ನಿಪಿ-18 ರಂತೆ ಹೇಳಿಕೆ ಕೊಟ್ಟಿರುತ್ತಾರೆ. ನಂತರ ಚಾಸಾ-5, 6, 7, 8 ಮತ್ತು 13 ಇವರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ಅವರು ನನ್ನ ಮುಂದೆ  ನಿಪಿ-25 ರಂತೆ ಹೇಳಿಕೆ ಕೊಟ್ಟಿರುತಾರೆ.

5. ನಂತರ ಆರೋಪಿತರನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿ ಹೆಚ್ಚಿನ ತನಿಖೆಗಾಗಿ ಪೋಲಿಸ್ ಅಭಿರಕ್ಷೆಗೆ ಪಡೆದುಕೊಂಡಿರುತ್ತೇನೆ. ಆರೋಪಿತರು ಈ ಹಿಂದೆ ಕೊಟ್ಟ ಸ್ವ ಇಚ್ಛಾ ಹೇಳಿಕೆಯಲ್ಲಿ ತಮ್ಮ ಜೊತೆ ಬಂದಲ್ಲಿ ಕೊಲೆಗೆ ಸಂಚು ರೂಪಿಸಿದ ಸ್ಥಳ ಹಾಗೂ ತಾವು ಧರಿಸಿದ್ದ ಬಟ್ಟೆಗಳನ್ನು ನಾಲ್ಕನೇ ಆರೋಪಿ ಧರಿಸಿದ್ದ ಶರ್ಟನ್ನು ಹೊರತುಪಡಿಸಿ ಉಳಿದ ಬಟ್ಟೆಗಳನ್ನು ಒಂದು

ನದಿಗೆ ಎಸೆದಿದ್ದು, ಸದ್ರಿ ಸ್ಥಳವನ್ನು ತೋರಿಸಿಕೊಡುವುದಾಗಿ ಕೊಟ್ಟ ಹೇಳಿಕೆಯಂತೆ ಪಂಚರಾದ ಚಾಸಾ-14 ಮತ್ತು 15 ಇವರನ್ನು ಕರೆಯಿಸಿಕೊಂಡು ಆರೋಪಿತರು ತೋರಿಸಿಕೊಟ್ಟಂತೆ ಕೊಡವೂರು ಗ್ರಾಮದ ಮೂಡುಬೆಟ್ಟು ಎಂಬಲ್ಲಿ ಒಂದು ಮನೆಗೆ ಕರೆದುಕೊಂಡು ಹೋಗಿದ್ದು ಸದ್ರಿ ಮನೆ ಆರೋಪಿ ರಂಜಿತ್ ಪಿಂಟೋ ಇವರು ವಾಸ ಇರುವ ಮನೆಯಾಗಿದ್ದು ಇದೇ ಸ್ಥಳದಲ್ಲಿ ಕೊಲೆಗೆ ಸಂಚು ರೂಪಿಸಿರುವುದಾಗಿ ಮನೆಯನ್ನು ತೋರಿಸಿಕೊಟ್ಟಿದ್ದು, ಸದ್ರಿ ಸ್ಥಳದಲ್ಲಿ ನಿಪಿ-48 ರಂತೆ ಮಹಜರು ಬರೆದಿರುತ್ತೇನೆ. ಸದ್ರಿ ಮಹಜರಿನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-48(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಛಾಯಾ ಚಿತ್ರಗಳನ್ನು ತೆಗೆದಿದ್ದು ಅವುಗಳನ್ನು ಈಗಾಗಲೇ ನಿಪಿ-49 ಮತ್ತು 50 ಎಂದು ಗುರುತಿಸಲಾಗಿದೆ. ಆರೋಪಿತರು ಮುಂದುವರಿದು ನಮ್ಮನ್ನು ಕೊಡಂಕೂರು ಸಾಯಿಬಾಬಾ ಮಂದಿರದ ಹತ್ತಿರದ ಸೇತುವೆಯ ಮೇಲೆ ಕರೆದುಕೊಂಡು ಹೋಗಿ ಇದೇ ಸ್ಥಳದಲ್ಲಿ ಕೃತ್ಯದ ಸಮಯ ಧರಿಸಿದ್ದ ಬಟ್ಟೆಗಳನ್ನು ಎಸೆದಿರುವುದಾಗಿ ತೋರಿಸಿ ಕೊಟ್ಟಿರುತ್ತಾರೆ. ನದಿಯಲ್ಲಿ ನೀರು ಹರಿಯುತ್ತಿದ್ದ ಕಾರಣ ಸದ್ರಿ ಬಟ್ಟೆ ದೊರೆತಿರುವುದಿಲ್ಲ. ಈ ಬಗ್ಗೆ ಸ್ಥಳದಲ್ಲಿ ನಿಪಿ-51 ರಂತೆ ಮಹಜರು ತಯಾರಿಸಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ51(ಬಿ) ಎಂದು ಗುರುತಿಸಲಾಯಿತು. ಆ ಸಮಯ ತೆಗೆದ ಛಾಯಾ ಚಿತ್ರವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-52 ಎಂದು ಗುರುತಿಸಲಾಗಿದೆ.

6. ದಿನಾಂಕ 10-07-2020 ರಂದು ಆರೋಪಿ ವಿನಯ್ ದೇವಾಡಿಗ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಿಳಿಸಿರುವಂತೆ ನಮ್ಮನ್ನು ಮತ್ತು ಪಂಚರನ್ನು ಸುಬ್ರಹ್ಮಣ್ಯ ನಗರದ ಒಂಭತ್ತನೇ ಕ್ರಾಸ್ ಬಳಿ ಕರೆದುಕೊಂಡು ಹೋಗಿ ರಸ್ತೆಯ ಪಶ್ಚಿಮ ಬದಿಯ ಕಂಪೌಂಡ್ ಬಳಿ ನಿಲ್ಲಿಸಿದ ಸ್ಕೂಟರನ್ನು ತೋರಿಸಿ ಕೃತ್ಯದ ಸಮಯ ಉಪಯೋಗಿಸಿರುವುದಾಗಿ ತೋರಿಸಿಕೊಟ್ಟಿದ್ದು, ಈ ಬಗ್ಗೆ ಸ್ಥಳದಲ್ಲಿ ನಿಪಿ-53 ರಂತೆ ಪಂಚರ ಸಮಕ್ಷಮ ಪಂಚನಾಮೆ ಬರೆದಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-53(ಬಿ) ಎಂದು ಗುರುತಿಸಲಾಯಿತು. ಆ ಸಮಯ ನಿಪಿ-54 ರಂತೆ ಛಾಯಾ ಚಿತ್ರ ತೆಗೆದಿರುತ್ತೇನೆ, ಅದರಲ್ಲಿ ಅಮಾನತ್ತುಪಡಿಸಿಕೊಂಡ ಸ್ಕೂಟರ್ ಕಂಡುಬರುತ್ತದೆ. ನಂತರ ದಸ್ತಗಿರಿ ಮಾಡಿದ ಆರೋಪಿತರನ್ನು

ನ್ಯಾಯಾಲಯದ ಮುಂದೆ ರಿಮಾಂಡ್ ಯಾದಿಯೊಂದಿಗೆ ಹಾಜರುಪಡಿಸಿರುತ್ತೇನೆ. ಚಾಸಾ14 ಮತ್ತು 15 ಇವರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ನಂತರ ತನಿಖೆ ಮುಂದುವರಿಸಿ ಉಳಿದ ಆರೋಪಿತರ ಪತ್ತೆಗಾಗಿ ಮಲ್ಪೆ ಪಿ.ಎಸ್.ಐ. ಇವರನ್ನು ನೇಮಕ ಮಾಡಿ ಕಳುಹಿಸಿಕೊಟ್ಟಿರುತ್ತೇನೆ. ದಿನಾಂಕ 12-07-2020 ರಂದು 5 ನೇ ಆರೋಪಿ ಅನುಪ್ ಕುಂದರ್ ಈತನನ್ನು ವಶಕ್ಕೆ ಪಡೆದು ನನ್ನ ಮುಂದೆ ತಂದು ಹಾಜರುಪಡಿಸಿರುತ್ತಾರೆ. ಆತನನ್ನು ಪಂಚರ ಸಮಕ್ಷಮದಲ್ಲಿ ಅಂಗ ಜಪ್ತಿ ಮಾಡಿ ಆತನ ವಶದಲ್ಲಿದ್ದ ಮೊಬೈಲ್ ಫೋನ್ ಮತ್ತು ಸ್ಕೂಟರನ್ನು ಅಮಾನತ್ತುಪಡಿಸಿಕೊಂಡು ನಿಪಿ-58 ರಂತೆ ಮಹಜರು ತಯಾರಿಸಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-58(ಸಿ) ಎಂದು ಗುರುತಿಸಲಾಯಿತು. ಮೊಬೈಲನ್ನು ಈಗ ನೋಡುತ್ತಿದ್ದು ಮುದ್ದೆಮಾಲು-9 ಎಂದು ಈಗಾಗಲೇ ಗುರುತಿಸಲಾಗಿದೆ. ನಿಪಿ-59ರ ಛಾಯಾ ಚಿತ್ರದಲ್ಲಿ ಅಮಾನತ್ತುಪಡಿಸಿಕೊಂಡ ಸ್ಕೂಟರ್ ಕಂಡುಬರುತ್ತದೆ. ಅದೇ ದಿವಸ ಚಾಸಾ-6 ಮತ್ತು 7 ಇವರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ಸೊತ್ತಿನ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಂತರ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

7. ದಿನಾಂಕ 27-07-2020 ರಂದು ತಕ್ಷೀರು ಸ್ಥಳ, ಕೊಲೆಗೆ ಸಂಚು ರೂಪಿಸಿದ ಸ್ಥಳ ಇವುಗಳ ದಾಖಲೆ ಒದಗಿಸಿಕೊಡುವಂತೆ ಉಡುಪಿ ತಹಶೀಲ್ದಾರ್ ಮತ್ತು ಪುರಸಭಾ ಮುಖ್ಯಾಧಿಕಾರಿಗಳಿಗೆ ಮನವಿ ಮಾಡಿಕೊಂಡಿರುತ್ತೇನೆ. ಅದೇ ದಿನ ಘಟನಾ ಸ್ಥಳದ ನಕ್ಷೆ ತಯಾರಿಸಿ ಕೊಡುವಂತೆ ಅಭಿಯಂತರರಿಗೆ ಕೂಡ ಮನವಿ ಮಾಡಿಕೊಂಡಿರುತ್ತೇನೆ. ದಿನಾಂಕ 14-08-2020 ರಂದು ಅಭಿಯಂತರರು ಘಟನಾ ಸ್ಥಳದ ನಕ್ಷೆ ತಯಾರಿಸಿಕೊಟ್ಟಿದ್ದು ಅದನ್ನು ಕಡತದಲ್ಲಿ ಅಳವಡಿಸಿ ಕೊಂಡಿರುತ್ತೇನೆ. ಅದನ್ನು ನಿಪಿ-55 ಎಂದು ಈಗಾಗಲೇ ಗುರುತಿಸಲಾಗಿದೆ. ದಿನಾಂಕ 17-08-2020 ರಂದು ಮರಣೋತ್ತರ ಪರೀಕ್ಷೆಯ ನಂತರ ವೈದ್ಯಾಧಿಕಾರಿಗಳು ಮೃತನ ದೇಹದಿಂದ ಶೇಖರಿಸಿದ ವಿಸೇರಾ ಮತ್ತು ಆತನ ದೇಹದ ಮೇಲೆ ಇದ್ದ ಬಟ್ಟೆಗಳನ್ನು ಸಂಗ್ರಹಿಸಿ ಪೋಲಿಸ್ ಸಿಬ್ಬಂದಿಯೊಂದಿಗೆ ಕಳುಹಿಸಿಕೊಟ್ಟಿರುತ್ತಾರೆ. ಸದ್ರಿ ಸೊತ್ತುಗಳನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ನಿಪಿ-67 ರಂತೆ

ಮಹಜರು ಬರೆದಿದ್ದು ಅದನ್ನು ಈಗಾಗಲೇ ನಿಪಿ-67 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-67(ಬಿ) ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿಕೊಂಡ ಬಟ್ಟೆಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮುದ್ದೆಮಾಲು-10 ರಿಂದ 14 ಎಂದು ಗುರುತಿಸಲಾಗಿದೆ. ಅದೇ ದಿನ ವೈದ್ಯಾಧಿಕಾರಿಗಳು ಮರಣೋತ್ತರ ಪರೀಕ್ಷಾ ವರದಿಯನ್ನು ನೀಡಿದ್ದು ಅದನ್ನು ಈಗಾಗಲೇ ನಿಪಿ-68 ಎಂದು ಗುರುತಿಸಲಾಗಿದೆ. ತನಿಖಾ ಕಾಲದಲ್ಲಿ ಅಮಾನತ್ತುಪಡಿಸಿಕೊಂಡ ಎಲ್ಲಾ ಸೊತ್ತುಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ದಿನಾಂಕ 18-08-2020 ರಂದು ತಹಶೀಲ್ದಾರ್ ಉಡುಪಿ ಇವರಿಂದ ದಾಖಲೆ ಪಡೆದುಕೊಂಡಿರುತ್ತೇನೆ. ಅದನ್ನು ನಿಪಿ-70 ಎಂದು ಈಗಾಗಲೇ ಗುರುತಿಸಲಾಗಿದೆ.

8. ದಿನಾಂಕ 28-08-2020 ರಂದು ಆರನೇ ಆರೋಪಿ ಗಿರೀಶ್ ಈತನು ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡು ಬಂದು ಠಾಣೆಗೆ ಹಾಜರಾದವರನ್ನು ಪಂಚರ ಸಮಕ್ಷಮ ದಸ್ತಗಿರಿ ಮಾಡಿ ಆತನ ವಶದಿಂದ ಒಂದು ಪಾಸ್ ಪೋರ್ಟ್, ಮೊಬೈಲ್ ಮತ್ತು ಮೋಟಾರು ಸೈಕಲನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಈ ಬಗ್ಗೆ ತಯಾರಿಸಿದ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-28 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-28(ಬಿ) ಎಂದು ಗುರುತಿಸಲಾಯಿತು. ಆರೋಪಿ ದಸ್ತಗಿರಿ ಕಾಲದಲ್ಲಿ ಸ್ವಇಚ್ಛಾ ಹೇಳಿಕೆ ನೀಡಿದ್ದು ತನ್ನೊಂದಿಗೆ ಬಂದಲ್ಲಿ ಕೃತ್ಯ ನಡೆದ ಸ್ಥಳ, ಕೃತ್ಯದ ಪೂರ್ವದಲ್ಲಿ ಕಾರನ್ನು ನಿಲ್ಲಿಸಿದ ಸ್ಥಳ, ಕೃತ್ಯಕ್ಕೆ ಉಪಯೋಗಿಸಿದ ಆಯುಧ ಮತ್ತು ಬಟ್ಟೆಯನ್ನು ಎಸೆದ ಸ್ಥಳ ತೋರಿಸುವುದಾಗಿ ನುಡಿದಿದ್ದು, ಸದ್ರಿ ಸ್ವಇಚ್ಛಾ ಹೇಳಿಕೆಯ ಭಾಗವನ್ನು ಈಗ ನೋಡುತ್ತಿದ್ದು, ನಿಪಿ-75 ಎಂದು ಗುರುತಿಸಲಾಯಿತು. ಆರನೇ ಆರೋಪಿಯ ವಶದಿಂದ ಪಡೆದುಕೊಂಡ ಮೊಬೈಲನ್ನು ಮುದ್ದೆಮಾಲು-4 ಎಂದು, ಪಾಸ್ ಪೋರ್ಟ್ ಅನ್ನು ನಿಪಿ-29 ಎಂದು ಗುರುತಿಸಲಾಗಿದೆ. ಮೋಟಾರು ಸೈಕಲಿನ ಭಾವ ಚಿತ್ರವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-30 ಎಂದು ಗುರುತಿಸಲಾಗಿದೆ. ಆರೋಪಿಯ ದಸ್ತಗಿರಿ ಕಾಲದಲ್ಲಿ ಆತ ಸ್ವ ಇಚ್ಛಾ ಹೇಳಿಕೆ ನೀಡಿದ್ದು ತಕ್ಷಣ ಇಬ್ಬರು ಪಂಚರನ್ನು ಬರಮಾಡಿಕೊಂಡು ಆರೋಪಿ

ನಮ್ಮನ್ನು ಮತ್ತು ಪಂಚರನ್ನು ಲಕ್ಷ್ಮೀನಗರದ ಮೂರನೇ ಕ್ರಾಸ್ ಬಳಿ ಕರೆದುಕೊಂಡು ಹೋಗಿ ಹಲ್ಲೆ ಮಾಡಿದ ಸ್ಥಳವನ್ನು ಮತ್ತು ಮೃತ ವ್ಯಕ್ತಿ ಗಾಯಗೊಂಡು ಬಿದ್ದ ಸ್ಥಳವನ್ನು ತೋರಿಸಿಕೊಟ್ಟಿದ್ದು, ಸದ್ರಿ ಸ್ಥಳಗಳನ್ನು ಪಂಚರ ಸಮಕ್ಷಮ ನಿಪಿ-31 ರಂತೆ ಪರಿಶೀಲಿಸಿ ಪಂಚನಾಮೆ ಬರೆದಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-31(ಬಿ) ಎಂದು ಗುರುತಿಸಲಾಯಿತು. ಅದೇ ಸಮಯ ಎರಡು ಛಾಯಾ ಚಿತ್ರಗಳನ್ನು ತೆಗೆದಿದ್ದು ಅವುಗಳನ್ನು ಈಗಾಗಲೇ ನಿಪಿ-32 ಮತ್ತು 33 ಎಂದು ಗುರುತಿಸಲಾಗಿದೆ.

9. ನಂತರ ಆರೋಪಿ ನಮ್ಮನ್ನು ಅಲ್ಲಿಂದ ಸ್ವಲ್ಪ ಮುಂದೆ 300 ಮೀ. ದೂರ ಕರೆದುಕೊಂಡು ಹೋಗಿ ಒಂದು ಸ್ಥಳ ತೋರಿಸಿದ್ದು ಕೃತ್ಯದ ಪೂರ್ವದಲ್ಲಿ ಇದೇ ಸ್ಥಳದಲ್ಲಿ ಕಾರು ನಿಲ್ಲಿಸಿದ ಸ್ಥಳವೆಂದು ತೋರಿಸಿಕೊಟ್ಟಿದ್ದು ಆ ಸ್ಥಳವನ್ನು ಪರಿಶೀಲಿಸಿದ್ದು ನಂತರ ಆರೋಪಿ 20 ಅಡಿ ಮುಂದೆ ಕರೆದುಕೊಂಡು ಹೋಗಿ ಇದೇ ಸ್ಥಳದಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಚಾಕು ಮತ್ತು ಕೃತ್ಯದ ಸಮಯ ನಾಲ್ಕನೇ ಆರೋಪಿ ಧರಿಸಿದ್ದ ಬಟ್ಟೆಯನ್ನು ಎಸೆದ ಜಾಗ ಎಂದು ತೋರಿಸಿಕೊಟ್ಟಿದ್ದು ಈ ಎರಡೂ ಸ್ಥಳಗಳನ್ನು ಪಂಚರ ಸಮಕ್ಷಮ ಪರಿಶೀಲಿಸಿ ನಿಪಿ-34 ರಂತೆ ಪಂಚನಾಮೆ ಬರೆದಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-34(ಬಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತೆಗೆದ ಛಾಯಾ ಚಿತ್ರಗಳನ್ನು ನಿಪಿ-35 ಮತ್ತು 36 ಎಂದು ಈಗಾಗಲೇ ಗುರುತಿಸಲಾಗಿದೆ. ನಂತರ ಠಾಣೆಗೆ ವಾಪಾಸ್ಸು ಬಂದಿರುತ್ತೇವೆ. ಮರುದಿನ ಆರೋಪಿ ಈ ಹಿಂದೆ ಹೇಳಿದ ಸ್ವ ಇಚ್ಛಾ ಹೇಳಿಕೆಯಂತೆ ಆರೋಪಿ ನಮ್ಮನ್ನು ಮತ್ತು ಪಂಚರನ್ನು ಸಾಯಿ ಮಂದಿರದ ಬಳಿ ಇರುವ ಇಂದ್ರಾಳಿ ಹೊಳೆಯ ಸೇತುವೆಯ ಬಳಿ ಕರೆದುಕೊಂಡು ಹೋಗಿ ಇದೇ ಸ್ಥಳದಲ್ಲಿ ನಿಂತು ಕೃತ್ಯದ ಸಮಯ ಧರಿಸಿದ್ದ ಬಟ್ಟೆಗಳನ್ನು ಹೊಳೆಗೆ ಎಸೆದಿರುವುದಾಗಿ ತೋರಿಸಿಕೊಟ್ಟಿರುತ್ತಾನೆ. ಸದ್ರಿ ಸ್ಥಳದಲ್ಲಿ ನಿಪಿ-37 ರಂತೆ ಮಹಜರು ತಯಾರಿಸಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-37(ಬಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತೆಗೆದ ಛಾಯಾ ಚಿತ್ರವನ್ನು ನಿಪಿ-38 ಎಂದು ಈಗಾಗಲೇ ಗುರುತಿಸಲಾಗಿದೆ. ದಿನಾಂಕ 29-07-2021 ರಂದು ಸಾಕ್ಷಿದಾರರಾದ ಚಾಸಾ.1, 2, 3, 4, 6, 18 ಇವರ ಮರು ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ಸದ್ರಿಯವರು ನನ್ನ ಮುಂದೆ ನಿಪಿ-8, ನಿಪಿ-12, ನಿಪಿ-16 ಮತ್ತು ನಿಪಿ-20 ರಂತೆ ಹೇಳಿಕೆ ಕೊಟ್ಟಿರುತ್ತಾರೆ. ಈ ಪ್ರಕರಣದ ಒಂದನೇ

ಆರೋಪಿ ವಿನಯ್ ದೇವಾಡಿಗ ಈತನ ವಿರುದ್ಧ ಎರಡು ಕ್ರಿಮಿನಲ್ ಪ್ರಕರಣಗಳು ಕ್ರಮವಾಗಿ ಮಲ್ಪೆ ಮತ್ತು ಉಡುಪಿ ನಗರ ಠಾಣೆಯಲ್ಲಿ ದಾಖಲಾಗಿದ್ದು ಅವುಗಳ ದಾಖಲೆಗಳನ್ನು ಠಾಣೆಯಿಂದ ಪಡೆದು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-76 ಮತ್ತು ನಿಪಿ-77 ಎಂದು ಗುರುತಿಸಲಾಯಿತು. ಎರಡನೇ ಆರೋಪಿ ರೋಹಿತ್ ಪಿಂಟೋ ಈತನ ವಿರುದ್ಧ ಮಲ್ಪೆ ಠಾಣೆಯಲ್ಲಿ ಎರಡು ಪ್ರಕರಣ, ಉಡುಪಿ ನಗರ ಠಾಣೆಯಲ್ಲಿ ಒಂದು ಪ್ರಕರಣ ದಾಖಲಾಗಿದ್ದು, ಷದ್ರಿ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-78 ರಿಂದ ನಿಪಿ-80 ಎಂದು ಗುರುತಿಸಲಾಯಿತು. ಈ ಆರೋಪಿಯ ವಿರುದ್ಧ ರೌಡಿ ಶೀಟರ್ ಹಾಳೆ ತೆರೆದಿದ್ದು, ಅದನ್ನು ನಿಪಿ-81 ಎಂದು, ಮೂರನೇ ಆರೋಪಿ ಸುಜಿತ್ ಪಿಂಟೋ ಈತನ ವಿರುದ್ಧ ಮಲ್ಪೆ ಉಡುಪಿ ನಗರ ಠಾಣೆ, ಹಿರಿಯಡ್ಕ ಠಾಣೆ ಹಾಗೂ ಮಣಿಪಾಲ ಪೋಲಿಸ್ ಠಾಣೆಯಲ್ಲಿ ಒಟ್ಟು 9 ಪ್ರಕರಣಗಳು ದಾಖಲಾಗಿದ್ದು, ಷದ್ರಿ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳಲ್ಲಿ ಎರಡು ಕೊಲೆ ಪ್ರಕರಣಗಳಾಗಿರುತ್ತವೆ. ಅವುಗಳನ್ನು ಕ್ರಮವಾಗಿ ನಿಪಿ-82 ರಿಂದ 90 ಎಂದು ಗುರುತಿಸಲಾಯಿತು. ಮೂರನೇ ಆರೋಪಿಯ ವಿರುದ್ಧ ರೌಡಿ ಶೀಟರ್ ಹಾಳೆ ತೆರೆದಿದ್ದು ಅದನ್ನು ನಿಪಿ-91 ಎಂದು ಗುರುತಿಸಲಾಯಿತು. ನಾಲ್ಕನೇ ಆರೋಪಿಯ ಮೇಲೆ ಮಣಿಪಾಲ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದ್ದು ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಅದನ್ನು ನಿಪಿ-92 ಎಂದು ಗುರುತಿಸಲಾಯಿತು. ಆರೋಪಿತರು ನ್ಯಾಯಾಂಗ ಬಂಧನದಲ್ಲಿದ್ದ ಕಾರಣ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಬಾಕಿ ಇರಿಸಿ ಆರೋಪಿತರ ವಿರುದ್ಧ ಸಾಕ್ಷಿ ಪುರಾವೆ ದೊರಕಿದ್ದರಿಂದ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

10. ನಂತರ ವಿಧಿವಿಜ್ಞಾನ ಪ್ರಯೋಗಾಲಯದಿಂದ ವರದಿ ಬಂದಿದ್ದು ಅದನ್ನು ಸ್ವೀಕರಿಸಿ ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಹಾಗೂ ಕೃತ್ಯಕ್ಕೆ ಬಳಸಿದ ಆಯುಧವನ್ನು ವೈದ್ಯಾಧಿಕಾರಿಗಳ ಮುಂದೆ ಹಾಜರುಪಡಿಸಿ ಮರಣದ ಬಗ್ಗೆ ಅಂತಿಮ

ಅಭಿಪ್ರಾಯ ನೀಡುವಂತೆ ಕೋರಿಕೊಂಡಿರುತ್ತೇನೆ. ನಂತರ ಅಂತಿಮ ಅಭಿಪ್ರಾಯವನ್ನು ಪಡೆದು ಹೆಚ್ಚಿನ ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

**ಆರೋಪಿತರ ಪರವಾಗಿ ಪಾಟೀ ಸವಾಲುಃ ಶ್ರೀ ಎಂ.ಎಸ್.ಎಸ್. ವಕೀಲರಿಂದ**

ಆರೋಪಿತರ ಪರ ವಕೀಲರು ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.